ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 111 |
| ಮಾನ್ಯ ಸದಸ್ಯರ ಹೆಸರು | : | ಶ್ರೀ.ಛಲವಾದಿ ಟಿ. ನಾರಾಯಣ ಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15.07.2024 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು ಮನುಷ್ಯರ ಬಳಕೆಗೆ ಪಶುಗಳ ಔಷಧವನ್ನು ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಿ ಸಾರ್ವಜನಿಕರ ಜೀವನ ಜೊತೆ ಚೆಲ್ಲಾಟವಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರವು ತೆಗೆದುಕೊಂಡ ಕ್ರಮಗಳೇನು; | ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು (KSMSCL) ಮನುಷ್ಯರ ಬಳಕೆಗೆ ಯಾವುದೇ ಪಶುಗಳ ಔಷಧವನ್ನು ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಿರುವುದಿಲ್ಲ. |
| ಆ) | ನಿಗಮವು ಸರ್ಕಾರ ಆಸ್ಪತ್ರೆಗಳಿಗೆ ಪಶುಗಳ ಬಳಕೆಯ ಯಾವ ಯಾವ ಔಷಧಿಗಳನ್ನು ಸರಬರಾಜು ಮಾಡಿರುತ್ತದೆ; ಔಷಧಗಳನ್ನು ಸರಬರಾಜು ಮಾಡಲು ಯಾವ ವರ್ಷದಲ್ಲಿ ಎಷ್ಟು ಮೊತ್ತದ ಟೆಂಡರ್‌ನ್ನು ಪಡೆದುಕೊಂಡಿತ್ತು; ನಿಗಮಕ್ಕೆ ಸದರಿ ಔಷಧಗಳನ್ನು ಯಾವ ಕಂಪನಿ ಸರಬರಾಜು ಮಾಡಿದೆ; ಅದರ ವಿರುದ್ಧ ಯಾವ ಕಾನೂನು ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು ಮಾನವ ಬಳಕೆಯ ಔಷಧವನ್ನು ಮಾತ್ರ ಖರೀದಿ ಮಾಡಿ, ಕರ್ನಾಟಕ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆರೋಗ್ಯ ಸಂಸ್ಥೆಗಳಿಗೆ ಸರಬರಾಜು ಮಾಡಲಾಗುತ್ತಿದೆ.<br><br>ಪಶು ಇಲಾಖೆಗೆ ಸಂಬಂಧಪಟ್ಟ ಯಾವುದೇ ಪಶು ಬಳಕೆಯ ಔಷಧವನ್ನು ಖರೀದಿ ಅಥವಾ ಸರಬರಾಜು ಮಾಡಿರುವುದಿಲ್ಲ.<br><br>ಮಾಧ್ಯಮಗಳಲ್ಲಿ, 'ಮನುಷ್ಯರ ಬಳಕೆಗೆ ಪಶುಗಳ ಔಷಧದ ಪೂರೈಕೆ' ಎಂಬ ಬಗ್ಗೆ ವರದಿಯಾದ ಹಿನ್ನೆಲೆಯಲ್ಲಿ ಈ ಕೆಳಕಂಡ ಮಾಹಿತಿ ನೀಡಲಾಗಿದೆ.<br><br>M/s ಪುಷ್ಕರ್ ಫಾರ್ಮಾ.ಲಿ. ಸಂಸ್ಥೆಯವರಿಗೆ ಕೆಳಕಂಡ 07 ವಿವಿಧ ಔಷಧಗಳ ಸರಬರಾಜಿಗಾಗಿ IND-1072 ಮತ್ತು IND-1076 ಟೆಂಡರ್ ಅಡಿಯಲ್ಲಿ ರೂ.62,89,576/- ಮೌಲ್ಯದ ಖರೀದಿ ಆದೇಶ ನೀಡಲಾಗಿರುತ್ತದೆ.<br><br>• Methyl Prednisolone Injection 40mg/ml 1x1Vial<br>• Carboxymethylcellulose Eye Drops 1% 1x10ml<br>• Oxymetazoline Pediatric (Nasal) Drops 0.25mg/ml or 0.025%w/v 1x10ml<br>• Flurbiprofen Eye Drops IP 0.03%w/v 1x5ml<br>• Sodium Chloride (Nasal) Drops 0.65%w/v 1x15ml |

| | | |
|---|---|---|
| | | • Timolol Maleate Drops 0.50% 1x5ml<br>• Oxymetazoline Hydrochloride (Nasal) Solution IP 0.5mg/ml or 0.05%w/w 1x10ml<br><br>• ಸಂಸ್ಥೆಯವರು ಮೇಲಿನ ಔಷಧಿಗಳನ್ನು ಔಷಧ ಉಗ್ರಾಣಗಳಿಗೆ 05/01/2024 ರೊಳಗೆ ಸರಬರಾಜು ಮಾಡಿದ್ದು, ತದನಂತರ ಈಗಾಗಲೇ ಸರಬರಾಜು ಮಾಡಿದ ಔಷಧಗಳಲ್ಲಿ LOGOGRAM DESIGN ನಲ್ಲಿ Printing error ಇದ್ದು, ಈ ಔಷಧಗಳನ್ನು ತಮ್ಮ ಸ್ವಂತ ವೆಚ್ಚದಲ್ಲಿ Masking ಮಾಡಲು ಅನುಮತಿಸಲು ವಿನಂತಿಸಿರುತ್ತಾರೆ.<br>• ಈ ಬಗ್ಗೆ ಪರಿಶೀಲಿಸಲಾಗಿ, ಔಷಧಗಳ ಲೇಬಲ್‌ನಲ್ಲಿ ನಿಗಮದ ಟೆಂಡರ್‌ನಿಯಮದಂತೆ, ಒಂದು ಭಾಗದಲ್ಲಿ ಆರೋಗ್ಯ ಇಲಾಖೆ, ಕರ್ನಾಟಕ ಸರ್ಕಾರ LOGOGRAM DESIGN ಸರಿಯಾಗಿದ್ದು ಇನ್ನೊಂದು ಭಾಗದಲ್ಲಿ GOK, AHVS Department ಎಂದು LOGOGRAM DESIGN ತಪ್ಪಾಗಿ ಪ್ರಿಂಟ್ ಆಗಿರುವುದು ಕಂಡುಬಂದಿರುತ್ತದೆ.<br>• ಸಂಸ್ಥೆಯವರು ಸಲ್ಲಿಸಿದ ತಯಾರಿಕಾ ಪರವಾನಿಗೆಗಳು, Product permission, BATCH MANUFACTURING RECORDS ಮತ್ತು BATCH PACKING RECORDS, NABL ಮಾನ್ಯತೆ ಪಡೆದ ಅಥವಾ ಸರ್ಕಾರದ ಅನುಮೋದಿತ ಪ್ರಯೋಗಾಲಯಗಳಿಂದ ಪಡೆದ ಗುಣ ವಿಶ್ಲೇಷಣಾ ವರದಿಗಳು ಮತ್ತು In-House ಗುಣ ವಿಶ್ಲೇಷಣಾ ವರದಿಗಳೆಲ್ಲವನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ 7 ಔಷಧಗಳು ಕೆ.ಎಸ್.ಎಂ.ಎಸ್.ಸಿ.ಎಲ್ ನಿಂದ ಆಹ್ವಾನಿಸಿದ strength ನೊಂದಿಗೆ ಹೊಂದಾಣಿಕೆಯಾಗಿದ್ದು, ಮಾನವ ಬಳಕೆಗಾಗಿ ತಯಾರಾಗಿವೆ ಮತ್ತು ಉತ್ತಮ ಗುಣಮಟ್ಟದವುಗಳೆಂದು ವರದಿಯಾಗಿರುತ್ತವೆ. ಅಲ್ಲದೆ ಲೇಬಲ್ ಮೇಲೆ ನೀಡಿರುವ ಸೂಚನೆಗಳಿಂದ ಈ ಎಲ್ಲಾ ಔಷಧಗಳು ಮಾನವ ಬಳಕೆಗಾಗಿ ಮಾತ್ರ ತಯಾರಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಲಾಯಿತು.<br>• ಔಷಧ ಉಗ್ರಾಣಗಳಲ್ಲಿ ಸದರಿ ಔಷಧಗಳ ದಾಸ್ತಾನು ಲಭ್ಯತೆ ಇಲ್ಲದಿರುವುದರಿಂದ ಮತ್ತು ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಆರೋಗ್ಯ ಸಂಸ್ಥೆಗಳಿಗೆ ಈ ಔಷಧಗಳು ಅಗತ್ಯವಿದ್ದುದರಿಂದ., ಸರಬರಾಜುದಾರರಿಗೆ ಖರೀದಿ ಆದೇಶದ ಮೌಲ್ಯದ ಮೇಲೆ 1% ದಂಡವನ್ನು ವಿಧಿಸಿ, ಇಂತಹ |

| | | |
|---|---|---|
| | | ಅನಾನುಕೂಲತೆ ಮತ್ತೊಮ್ಮೆ ಮಾಡದಿರಲು ಎಚ್ಚರಿಸಲಾಯಿತು ಹಾಗೂ Logogram design ನಲ್ಲಿನ ಮುದ್ರಣ ದೋಷವನ್ನು mask ಮಾಡಿ, ಔಷಧಗಳನ್ನು ವಿತರಿಸಲು ತಯಾರಿಕಾ ಸಂಸ್ಥೆಗೆ ಸೂಚಿಸಲಾಗಿರುತ್ತದೆ.<br>• ನಂತರ ಮಾಧ್ಯಮಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ಔಷಧಗಳ ಬಗ್ಗೆ ಯಾವುದೇ ತಪ್ಪು ಮಾಹಿತಿಗೆ ಅವಕಾಶ ನೀಡಬಾರದೆಂಬ ಉದ್ದೇಶದಿಂದ, ಈ ಎಲ್ಲಾ ಔಷಧಗಳನ್ನು ಜಿಲ್ಲಾ ಔಷಧ ಉಗ್ರಾಣಗಳಿಂದ ಮತ್ತು ಆರೋಗ್ಯ ಸಂಸ್ಥೆಗಳಿಂದ ಹಿಂಪಡೆದು, ಸರಬರಾಜು ಮಾಡಿರುವ ಔಷಧಗಳ ಬದಲಾಗಿ ಹೊಸ ದಾಸ್ತಾನು ನೀಡಲು M/s ಪುಷ್ಕರ್ ಫಾರ್ಮಾ ಲಿ. ತಯಾರಿಕ ಸಂಸ್ಥೆಗೆ ಸೂಚಿಸಲಾಗಿರುತ್ತದೆ.<br>• ಕೆ.ಎಸ್.ಎಂ.ಎಸ್.ಸಿ.ಎಲ್ ನ NABL ಮಾನ್ಯತೆ ಪಡೆದ ಖಾಸಗಿ ಎಂಪನೆಲ್ಡ್ ಪ್ರಯೋಗಾಲಯಗಳ ಪರೀಕ್ಷಾ ವರದಿಗಳ ಪ್ರಕಾರ ಹಾಗೂ ಔಷಧ ನಿಯಂತ್ರಣ ಇಲಾಖೆಯಿಂದ ಲಭ್ಯವಿರುವ ವರದಿಗಳ ಪ್ರಕಾರ, ಈ ಔಷಧಗಳು Sample confirms to IP Standard / sample confirms to Label claim ಎಂದಿದ್ದು, ಕೆ.ಎಸ್.ಎಂ.ಎಸ್.ಸಿ.ಎಲ್ ನಿಂದ ಆಹ್ವಾನಿಸಿದ Product strength ನೊಂದಿಗೆ ಹೊಂದಾಣಿಕೆಯಾಗಿದ್ದು, ಮಾನವ ಬಳಕೆಗಾಗಿ ತಯಾರಾಗಿವೆ ಮತ್ತು ಉತ್ತಮ ಗುಣಮಟ್ಟದವುಗಳೆಂದು ವರದಿಯಾಗಿರುತ್ತವೆ. |
| ಇ) | ನಿಗಮಕ್ಕೆ ಸರಬರಾಜು ಮಾಡಿರುವ ಔಷಧಗಳನ್ನು ಔಷಧ ನಿಯಂತ್ರಣ ಇಲಾಖೆಯು ಔಷಧಗಳ ಗುಣಮಟ್ಟವನ್ನು ಪರೀಕ್ಷೆಗೊಳಪಡಿಸಿದೆಯೇ; ಉತ್ತಮ ಗುಣಮಟ್ಟ ಹಾಗೂ ಗುಣಮಟ್ಟದ್ದಲ್ಲ ಎಂಬ ವರದಿ ಬಂದ ಔಷಧಗಳು ಯಾವುವು; ಉತ್ತಮ ಗುಣಮಟ್ಟದಲ್ಲದ ಔಷಧಗಳನ್ನು ಪೂರೈಸಿದ ಕಂಪನಿಯ ವಿರುದ್ಧ ತೆಗೆದುಕೊಂಡ ಕ್ರಮಗಳೇನು; | ಔಷಧ ನಿಯಂತ್ರಣ ಇಲಾಖೆಯಿಂದ ಪರೀಕ್ಷೆಗೆ ಒಳಪಡಿಸಿದೆ.<br>• ಔಷಧ ನಿಯಂತ್ರಣ ಇಲಾಖೆಯಿಂದ ಲಭ್ಯವಿರುವ ವರದಿಗಳ ಪ್ರಕಾರ, ಈ ಔಷಧಗಳು Sample confirms to IP Standard / Label claim ಮತ್ತು ಉತ್ತಮ ಗುಣಮಟ್ಟದವುಗಳೆಂದು ವರದಿಯಾಗಿರುತ್ತವೆ. ಈ ವರದಿಗಳಿಂದ, ಈ 7 ಔಷಧಗಳು ಕೆ.ಎಸ್.ಎಂ.ಎಸ್.ಸಿ.ಎಲ್ ನಿಂದ ಆಹ್ವಾನಿಸಿದ Product strength ನೊಂದಿಗೆ ಹೊಂದಾಣಿಕೆಯಾಗಿದ್ದು, ಮಾನವ ಬಳಕೆಗಾಗಿ ತಯಾರಾಗಿವೆ ಹಾಗೂ ಉತ್ತಮ ಗುಣಮಟ್ಟದವುಗಳೆಂದು ಸ್ಪಷ್ಟವಾಗಿರುತ್ತದೆ. |

| | | |
|---|---|---|
| | | • ಕೆ.ಎಸ್.ಎಂ.ಎಸ್.ಸಿ.ಎಲ್ ವತಿಯಿಂದ M/s ಪುಷ್ಕರ್ ಫಾರ್ಮಾ. ಲಿ. ಸಂಸ್ಥೆಯು ಸರಬರಾಜು ಮಾಡಿದ 7 ಔಷಧಗಳನ್ನು NABL ಮಾನ್ಯತೆ ಪಡೆದ ಖಾಸಗಿ ಎಂಪನೆಲ್ಡ್ ಪ್ರಯೋಗಾಲಯಗಳಾದ ಮೆ. Devansh Testing & Research laboratory Pvt., Ltd., M/s Standard Analytical Laboratory ಮತ್ತು M/s Delhi test house ಗಳಿಗೆ ಗುಣಮಟ್ಟ ಪರೀಕ್ಷೆಗೆ ಕಳುಹಿಸಿದ್ದು, ಪರೀಕ್ಷಾ ವರದಿಗಳ ಪ್ರಕಾರ ಈ ಎಲ್ಲಾ ಔಷಧಗಳು ಉತ್ತಮ ಗುಣಮಟ್ಟವನ್ನು ಹೊಂದಿವೆ ಎಂದು ವರದಿಯಾಗಿರುತ್ತವೆ. ಸರಬರಾಜುದಾರರಿಗೆ ಖರೀದಿ ಆದೇಶದ ಮೌಲ್ಯದ ಮೇಲೆ 1% ದಂಡವನ್ನು ವಿಧಿಸಿ, ಇಂತಹ ಅನಾನುಕೂಲತೆ ಮತ್ತೊಮ್ಮೆ ಮಾಡದಿರಲು ಎಚ್ಚರಿಸಿ ಹೊಸದಾಗಿ ಔಷಧಗಳನ್ನು ಪೂರೈಕೆ ಮಾಡಲು ಸೂಚಿಸಲಾಗಿದೆ. |
| ಈ) | ಸರಬರಾಜುದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆಯೇ; ತಪ್ಪಿತಸ್ಥ ಅಧಿಕಾರಿಗಳು ಹಾಗೂ ಸಂಬಂಧಪಟ್ಟವರ ವಿರುದ್ಧ ಯಾವ ಕ್ರಮಗಳನ್ನು ತೆಗೆದುಕೊಳ್ಳಲು ತೀರ್ಮಾನಿಸಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು) | • ಔಷಧ ನಿಯಂತ್ರಣ ಇಲಾಖೆಯ ಮತ್ತು NABL ಮಾನ್ಯತೆ ಪಡೆದ , ಖಾಸಗಿ ಎಂಪನೆಲ್ಡ್ ಪ್ರಯೋಗಾಲಯಗಳ ಪರೀಕ್ಷಾ ವರದಿಗಳಲ್ಲಿ M/s ಪುಷ್ಕರ್ ಫಾರ್ಮಾ. ಲಿ. ಸಂಸ್ಥೆಯು ಸರಬರಾಜು ಮಾಡಿದ 7 ಔಷಧಗಳು ಉತ್ತಮ ಗುಣಮಟ್ಟದ್ದೆಂದು ವರದಿಯಾಗಿರುವ ಕಾರಣ, ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಿರುವುದಿಲ್ಲ.<br><br>ಆದರೂ Printing error in logogram design ನಿಂದಾಗಿ ಔಷಧಗಳ ಬಗ್ಗೆ ಸಾರ್ವಜನಿಕರಲ್ಲಿ ಯಾವುದೇ ತಪ್ಪು ಮಾಹಿತಿಗೆ ಅವಕಾಶವಾಗಬಾರದೆಂಬ ಕಾರಣದಿಂದಾಗಿ, ಈ ಎಲ್ಲಾ ಔಷಧಗಳನ್ನು ಮರು ಪೂರೈಕೆ ಮಾಡಲು ತಯಾರಿಕ ಸಂಸ್ಥೆ M/s ಪುಷ್ಕರ್ ಫಾರ್ಮಾ. ಲಿ. ಗೆ ಸೂಚಿಸಲಾಗಿದೆ. |

ಸಂಖ್ಯೆ: ಆಕುಕ 31 ಎಸ್.ಟಿ.ಕ್ಯೂ. 2024

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು